ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿಯವರು — ೧೯೬೬ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳ (ತಿದ್ದುಪಡಿ) ಶಾಸನದ ೧೫(೨)ನೇ ಕಲಮಿನ ಮೇರೆಗೆ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳು (ವಿಧಾನ ಮಂಡಲದ ಸದಸ್ಯರುಗಳಿಗೆ ಮೋಟಾರ್ ಕಾರ್ ಅಥವಾ ಮೊ ಟಾರ್ ಸೈಕಲ್ ಕೊಳ್ಳಲು ಮುಂಗಡ) ನಿಯಮ ೧೯೮೫ಕ್ಕೆ ಸಂಬಂಧಿಸಿದಂತೆ ೧೯೮೬ನೇ ಜನವರಿ ೧ರಂದು ಹೊರಡಿಸಲಾದ ೧ ಎಲ್‌ಎ ಎಲ್‌ಸಿ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಮನವಿಗಳನ್ನೊಪ್ಪಿಸುವುದು

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೆ, ಭದ್ರಾ ಅಣೆಕಟ್ಟೆಯ ನಿರ್ಮಾಣದಿಂದ ಮುಳುಗಡೆಯಾಗಿ ಶಿವಮೊಗ್ಗ ತಾಲ್ಲೂಕಿನ ಲಕ್ಕಿನಕೊಪ್ಪ ಮತ್ತು ತೋಟದಕೆರೆ ಪುನರ್ ವಸತಿಗೊಂಡ ಕೃಷಿ ಕುಟುಂಬಗಳಿಗೆ ಜಾರ್ಗಲ್ ಹಳ್ಳಕ್ಕೆ ಅಣೆಕಟ್ಟು ನಿರ್ಮಿಸಿ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಮನವಿಯನ್ನೊಪ್ಪಿಸುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್.— ರಾಣೇಬೆನ್ನೂರು ತಾಲ್ಲೂಕಿನ ಹನುಮನಹಳ್ಳಿ–ಮುಂದ್ವೇನೂರು ಗ್ರಾಮಗಳ ನಡುವೆ ಇರುವ ಹಳ್ಳಕ್ಕೆ ಸೇತುವೆಯನ್ನು ಕಟ್ಟಿಸುವ ಬಗ್ಗೆ ಮನವಿಯನ್ನು ಮತ್ತು ರಾಣೇಬೆನ್ನೂರು ತಾಲ್ಲೂಕಿನ ಮೂಗೂಡ ಕ್ರಾಸಿನಿಂದ ಇಟಗಿ, ಮಂದೇನೂರು–ಮಾಕನೂರು ಕ್ರಾಸಿನವರೆಗೆ ರಸ್ತೆಯನ್ನು ದುರಸ್ತಿ ಮಾಡಿ ಡಾಂಬರೀಕರಣ ಮಾಡುವುದನ್ನು ಕುರಿತು ಮನವಿಯನ್ನು ಸಭೆಯ ಮುಂದೆ ಇಡುತ್ತೇನೆ.

ಶ್ರೀ ಕೆ. ಕರುಣಾಲ್.—ಸುಳ್ಯ ತಾಲ್ಲೂಕಿನ ಅಯ್ಯನಕಟ್ಟೆ–ಚೊಕ್ಕಾಡಿ– ಬೆಂಗಮಲೆ ಪಿಡಬ್ಲ್ಯೂಡಿ ರಸ್ತೆಯ ಕಾಮಗಾರಿಗೆ ಹಣವನ್ನು ಬಿಡುಗಡೆ ಮಾಡಿ ಡಾಂಬರೀಕರಣ ಮಾಡಿಸುವುದರ ಬಗ್ಗೆ ಮನವಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮನವಿಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆಗಳು

೧. ಸ್ಟ್ಯಾಂಪ್ ಶುಲ್ಕ ವಿನಾಯಿತಿ ಮುಂದುವರಿಯದೇ ಇರುವುದರಿಂದ ರೈತರಿಗಾಗಿರುವ ತೊಂದರೆ

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೆ, ಸ್ಟ್ಯಾಂಪ್ ಶುಲ್ಕದ ವಿನಾಯಿತಿ ನಿಯಮ ಮುಂದುವರೆಯದೆ ಇರುವುದರಿಂದ ರೈತರಿಗೆ ತೊಂದರೆಯಾಗಿರುವ ವಿಚಾರವನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತಂದು ಈ ಬಗ್ಗೆ ಉತ್ತರ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು). —

ರೈತರು ಸಾಲ ಪಡೆಯುವ ಸಂದರ್ಭದಲ್ಲಿ ೧೦ ಸಾವಿರ ರೂಪಾಯಿಗಳವರೆಗೆ ಸ್ಟ್ಯಾಂಪ್ ಶುಲ್ಕದಿಂದ ಪೂರ್ಣ ವಿನಾಯಿತಿ ಮತ್ತು ೧೦,೦೦೦–೦೦ ರೂ.ಗಳ ಹೆಚ್ಚಿನ ಸಾಲಕ್ಕೆ ಶೇಕಡ ೫೦ರಷ್ಟು ವಿನಾಯಿತಿಯ ಸೌಲಭ್ಯ ಸರ್ಕಾರದ ಆದೇಶ ಸಂಖ್ಯೆ ಆರ್.ಡಿ. ೧ ಇಎಸ್‌ಆರ್. ೮೪, ದಿನಾಂಕ ೮–೧–೧೯೮೪ರ ಪ್ರಕಾರ ದಿನಾಂಕ ೩೧–೧೨–೧೯೮೫ರ ವರೆಗೆ ಜಾರಿಯಲ್ಲಿತ್ತು. ಈ ಸೌಲಭ್ಯವನ್ನು ದಿನಾಂಕ ೧–೧–೧೯೮೬ರಿಂದ ಮುಂದುವರಿಸಬೇಕೆಂಬ ಉದ್ದೇಶವು ಸರ್ಕಾರಕ್ಕೆ ಇದ್ದು, ಇದನ್ನು ಪರಿಶೀಲಿಸಲಾಗುತ್ತಿದೆ ಹಾಗೂ ಶೀಘ್ರದಲ್ಲಿ ಈ ಬಗ್ಗೆ ಆದೇಶವು ಹೊರಡಿಸಲಾಗುವುದು. ಸರ್‌ಚಾರ್ಜನ್ನು ಕರ್ನಾಟಕ ಮುನಿಸಿಪಾಲಿಟಿಸ್ ಕಾಯಿದೆ ಮತ್ತು ಕರ್ನಾಟಕ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳ ಕಾಯಿದೆಯ ಮೇರೆಗೆ ವಿಧಿಸಲಾಗುತ್ತಿದೆ ಈಗಾಗಲೇ ೧೦,೦೦೦–೦೦ರೂ.

ಗಳವರೆಗೆ ಸರ್‌ಚಾರ್ಜ್‌ನ್ನು ಸಂಪೂರ್ಣವಾಗಿ ವಿನಾಯಿತಿ ಇರುವುದರಿಂದ, ಇನ್ನು ಹೆಚ್ಚುನ ಪೊತ್ತಕ್ಕೆ ವಿನಾಯಿತಿ ನೀಡಲು ಅವಶ್ಯಕತೆ ಇಲ್ಲವೆಂದು ಕಂಡುಬರುತ್ತದೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೆ, ಇವರು ಇನ್ನೂ ಇದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈಗ ಏನಾಗಿದೆಯೆಂದರೆ ಒಂದನೇ ತಾರೀಖಿನಿಂದ ಇವತ್ತಿನವರೆಗೂ ಸಾಲ ಪಡೆಯುವ ರೈತರು ಮಾರ್ಟ್‌ಗೇಜ್ ಮಾಡುವಾಗ ಪೂರ್ಣ ಹಣದ ಸ್ಟ್ಯಾಂಪ್ ಶುಲ್ಕ ಕೊಡಬೇಕಾಗಿರುವುದರಿಂದ ರೈತರು ಸಾಲ ಪಡೆದು ನೀರಾವರಿ ಪಂಪ್‌ಸೆಟ್ಟು ಹಾಕಿಸುವುದು ಹೊರೆಯಾಗಿದೆ. ಇದರಿಂದ ಕೆಲಸ ನಿಂತುಹೋಗುತ್ತದೆ. ಆದ್ದರಿಂದ ತ್ವರಿತವಾಗಿ ಈ ಕೆಲಸವನ್ನು ತಾವು ಪೂರೈಸಬೇಕು. ಅದಲ್ಲದೆ ೩೦ ರೂಪಾಯಿಗಳ ಸರ್‌ಚಾರ್ಜ್ ಇರುವುದನ್ನು ರದ್ದುಪಡಿಸಿ ವಿನಾಯಿತಿ ಕೊಡಬೇಕೆಂದು ಕಂದಾಯ ಸಚಿವರಿಗೆ ವಿನಂತಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅದಷ್ಟು ಜಾಗ್ರತೆ ಆಜ್ಞೆ ಹೊರಡಿಸುತ್ತೇವೆ. ಸಾಲ ತೆಗೆದುಕೊಳ್ಳುವ ರೈತರು ಅದರಲ್ಲೂ ನೀರಾವರಿ ಬಾವಿಗಾಗಿ ಸುಮಾರು ೨೫ ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಹೆಚ್ಚಿಸುವುದು ಕೂಡ ಸರ್ಕಾರದ ಆಲೋಚನೆಯಲ್ಲಿದೆ.

(೨) ದಾವಣಗೆರೆ ಬಸ್ ನಿಲ್ದಾಣದಲ್ಲಿ ಪೋಲೀಸ್ ಪೇದೆಗಳು ಶಾಸಕರ ಹೆಣ್ಣು ಮಕ್ಕಳ ಮೇಲೆ ಹಲ್ಲೆ ಮಾಡಿರುವುದು

ಶ್ರೀ ಕೆ. ಬಿ. ಕೋಳೀವಾಡ (ರಾಣೆಬೆನ್ನೂರು).—ಮಾನ್ಯ ಅಧ್ಯಕ್ಷರೇ, ಕೆಲವೇ ದಿವಸದ ಹಿಂದೆ ಪೋಲೀಸ್ ಪೇದೆಗಳು ದಾವಣಗೆರೆ ಬಸ್ ನಿಲ್ದಾಣದಲ್ಲಿ ಶಾಸಕರ ಹೆಣ್ಣುಮಕ್ಕಳ ಮೇಲೆ ಹಲ್ಲೆ ಮಾಡಿದ ವಿಚಾರವನ್ನು ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ದಿನಾಂಕ ೯-೧-೧೯೮೬ರಂದು ದಾವಣಗೆರೆಯಿಂದ ಪ್ರಕಟವಾಗುವ 'ಜನತಾ ವಾಣಿ' ದಿನ ಪತ್ರಿಕೆಯಲ್ಲಿ ಈ ಕೆಳಕಂಡ ಶಿರೋನಾಮೆಯಲ್ಲಿ ಪ್ರಕಟವಾಯಿತು. 'MISBEHAVIOUR BY WOMEN POLICE TOWARDS THE DAUGHTERS OF MLA" ಸದರಿ ಪ್ರಕಟಣೆಯನ್ನು ನೋಡಿದ ಚಿತ್ರದುರ್ಗ ಜಿಲ್ಲಾ ಆರಕ್ಷಕ ಅಧೀಕ್ಷಕರವರು ದಾವಣಗೆರೆ ವೃತ್ತ ಆರಕ್ಷಕ ನಿರೀಕ್ಷಕರವರು ತನಿಖೆ ಮಾಡಿ ವಿವರವಾದ ವರದಿಯನ್ನು ಕಳುಹಿಸುವಂತೆ ಸೂಚಿಸಿದರು. ಆದುಂ ಈ ಕೆಳಕಂಡಂತೆ ಇದೆ.

ಮಹಿಳಾ ಆರಕ್ಷಕ ಉಪ ನಿರೀಕ್ಷಕರಾದ ಸಾಕಮ್ಮ, ಮಹಿಳಾ ಆರಕ್ಷಕ ಮುಖ್ಯ ಪೇದೆ ೧೦೧ ಭಾಗ್ಯಮ್ಮ ಮತ್ತು ಮಹಿಳಾ ಪೋಲೀಸ್ ಪೇದೆ ೭೯ ಫಾತಿಮಾರವರು ದಾವಣಗೆರೆ ಬಡಾವಣೆಯ ಪೋಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ದಿನಾಂಕ ೮-೧-೧೯೮೬ ರಂದು ರಾತ್ರಿ ಸುಮಾರು ೭-೩೦ ಗಂಟೆಯ ಸಮಯದಲ್ಲಿ ದಾವಣಗೆರೆಯ ಉಪ ವಿಭಾಗದ ಆರಕ್ಷಕ ಉಪ ಅಧೀಕ್ಷಕರವರ ಸಾಧಾರಣ ಆದೇಶದನ್ವಯ ಪ್ರಕಾರ ದಾವಣಗೆರೆ ಬಸ್ ನಿಲ್ದಾಣಕ್ಕೆ ಎಸ್‌ಐಟಿ ಪ್ರಕರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಹೋದರು. ಇಲ್ಲಿ ಇಬ್ಬರು ಹುಡುಗಿಯರು ಕುಳಿತಿದ್ದನ್ನು ನೋಡಿ ಅವರನ್ನು ಎಲ್ಲಿಯವರು ಮತ್ತು ಎಲ್ಲಿಗೆ ಹೋಗಬೇಕಾಗುತ್ತದೆಂದು ವಿಚಾರಿಸಿದರು ಅವರಿಬ್ಬರು ಯಾವ ಉತ್ತರವನ್ನು ಕೊಡಲಿಲ್ಲ. ಆದ್ದರಿಂದ ಅವರಿಬ್ಬರು ದಾವಣಗೆರೆಯ ಪೂರ್ವ ಪೋಲೀಸ್ ಠಾಣೆಗೆ ಬರಲು ತಿಳಿಸಿದರು ಅದರ ಪ್ರಕಾರ ಅವರು ಪೋಲೀಸ್ ಠಾಣೆಗೆ ಹೊರಟರು ದಾರಿ ಮಧ್ಯದಲ್ಲಿ ಶ್ರೀ ಕೆ ಎಸ್ ಬಿಳಗಿಯವರು ಮೇಲ್ಕಂಡ ಪೋಲೀಸ್‌ರನ್ನು ಭೇಟಿಮಾಡಿ ತಾನು ಬ್ಯಾಡಗಿ ಕ್ಷೇತ್ರದಿಂದ ಬಂದ ವಿಧಾನ ಸಭಾ ಸದಸ್ಯನೆಂದು ಸೂಚಿಸಿ ಅವರಿಬ್ಬರು ತನ್ನ ಹೆಣ್ಣುಮಕ್ಕಳು ಎಂದು ತಿಳಿಸಿ ಅವರನ್ನು ಬಿಡುವಂತೆ ಕೇಳಿದರು. ವಿಧಾನ ಸಭಾ ಸದಸ್ಯರು ಮೇಲ್ಕಂಡಂತೆ ಕೇಳಿಕೊಂಡಾಗ್ಯೂ ಮಹಿಳಾ ಪೋಲೀಸರು ಅವರಿಬ್ಬರು ಹುಡುಗಿಯರನ್ನು ಪೋಲೀಸ್ ಠಾಣೆಗೆ ಕರೆದೂಯ್ದರು. ಶ್ರೀ ಕೆ. ಎಸ್. ಬಿಳಗಿಯವರು ಸಹ ಇವರೊಡನೆ ಪೋಲೀಸ್ ಠಾಣೆಗೆ ಹೋದರು. ದಾವಣಗೆರೆ ಬಡಾವಣೆಯ